# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **927** |
| ಉತ್ತರಿಸಬೇಕಾದ ದಿನಾಂಕ | : | 13.12.2023 |
| ಉತ್ತರಿಸಬೇಕಾದ ಸಚಿವರು | : | ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆಶ್ರಯ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಆಶ್ರಯ ಮನೆಗಳನ್ನು ನಿರ್ಮಾಣ ಮಾಡಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜೀವ್ ಗಾಂಧಿ ವಸತಿ ನಿಗಮವು 2000 ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಆಶ್ರಯ ಯೋಜನೆ ಹಾಗೂ ಇತರೆ ವಸತಿ ಯೋಜನೆಗಳಡಿ 2000-01 ನೇ ಸಾಲಿನಿಂದ ನವೆಂಬರ್-2023 ರವರೆಗೆ ಒಟ್ಟಾರೆ 49,43,927 ಮನೆಗಳನ್ನು ಪೂರ್ಣಗೊಳಿಸಲಾಗಿದೆ.<br><br>ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಆಶ್ರಯ ಯೋಜನೆಯಡಿಯಲ್ಲಿ ನಿರ್ಮಿಸಿರುವ ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ; | ಆಶ್ರಯ ಯೋಜನೆಯು ವಿವಿಧ ಹೆಸರುಗಳಲ್ಲಿ ಮರು ನಾಮಕಾರಣವಾಗಿದ್ದು, ಅದರಂತೆ ಪ್ರಸ್ತುತ ಜಾರಿಯಲ್ಲಿರುವ ವಸತಿ ಯೋಜನೆಗಳಡಿ ವಸತಿ ಸೌಕರ್ಯ ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ನಿಗಧಿಪಡಿಸಲಾಗಿದೆ.<br><br>• ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು (ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ) ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.<br>• ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದಲ್ಲಿ ರೂ.1,20,000/- ಹಾಗೂ ನಗರ ಪ್ರದೇಶದಲ್ಲಿ ರೂ.2,00,000/-ಕ್ಕಿಂತ ಕಡಿಮೆ ಇರಬೇಕು.<br>• ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದ್ಯಸರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.<br>• ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)<br>• ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.<br>• ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ)ಯಡಿ ವಸತಿ ಸೌಲಭ್ಯ ಪಡೆಯಲು ಕೇಂದ್ರ ಸರ್ಕಾರದ Awaas Plus PWL ಪಟ್ಟಿಯಲ್ಲಿ ಹೆಸರು ಸೇರಿರಬೇಕು. |

| | | |
|---|---|---|
| | | ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ) ಯಡಿ ಫಲಾನುಭವಿಗಳನ್ನು ಗುರುತಿಸಲು/ ಆಯ್ಕೆ ಮಾಡುವ ಮಾನದಂಡ ಕೆಳಕಂಡಂತಿದೆ.<br>• ಫಲಾನುಭವಿಯು ಬೇಡಿಕೆ ಸಮೀಕ್ಷೆಯಲ್ಲಿರಬೇಕು.<br>• ದೇಶದಾದ್ಯಂತ ಅವನ/ಅವಳ ಹೆಸರಿನಲ್ಲಿ ಯಾವುದೇ ಮನೆ ಇರಬಾರದು.<br>• ವಾರ್ಷಿಕ ಆದಾಯ 3 ಲಕ್ಷಕ್ಕಿಂತ ಕಡಿಮೆ ಇರಬೇಕು.<br>• ಇತರೇ ವಸತಿ ಯೋಜನೆಗಳಲ್ಲಿ ಈಗಾಗಲೇ ಸಹಾಯಧನ ಪಡೆದಿರಬಾರದು.<br>• ಫಲಾನುಭವಿಯು ಸ್ವಂತ ನಿವೇಶನ ಹೊಂದಿರಬೇಕು. |
| ಇ) | ಒಂದೇ ಕುಟುಂಬಕ್ಕೆ ಒಂದಕ್ಕಿಂತ ಹೆಚ್ಚು ಮನೆಗಳನ್ನು ವಿತರಿಸಿರುವ ನಿದರ್ಶನಗಳಿವೆಯೇ; ಹಾಗಿದ್ದಲ್ಲಿ, ಅಂತಹ ನ್ಯೂನತೆಯನ್ನು ಸರಿಪಡಿಸಲು ಸರ್ಕಾರದ ವತಿಯಿಂದ ಏನು ಕ್ರಮ ಕೈಗೊಳ್ಳಲಾಗಿದೆ ? | ಅರ್ಹ ಕುಟುಂಬಕ್ಕೆ ಒಂದೇ ಮನೆ ಸೌಕರ್ಯವನ್ನು ಒದಗಿಸುವ ದೃಷ್ಟಿಯಿಂದ 2017 ನೇ ಸಾಲಿನಿಂದ ಫಲಾನುಭವಿಗಳಿಂದ ಈ ಕೆಳಕಂಡ ದಾಖಲೆಗಳನ್ನು ಕಡ್ಡಾಯಗೊಳಿಸಿ ವೆಬ್-ಸರ್ವಿಸ್ ಮೂಲಕ ಪಡೆಯಲಾಗುತ್ತಿದೆ.<br>• ಆಧಾರ್<br>• ಕುಟುಂಬ ಪಡಿತರ ಚೀಟಿ<br>• ಜಾತಿ ಪ್ರಮಾಣ ಪತ್ರ(ಪರಿಶಿಷ್ಟ ಜಾತಿ/ಪಂಗಡ, ಅಲ್ಪಸಂಖ್ಯಾತರು)<br>• ಆದಾಯ ಪ್ರಮಾಣ ಪತ್ರ<br>ಈ ಮೇಲ್ಕಂಡ ದಾಖಲೆಗಳನುಸಾರ ಈಗಾಗಲೇ ವಸತಿ ಸೌಕರ್ಯ ಪಡೆದಿರುವ ಹಾಗೂ ಮುಂದೆ ಪಡೆಯುವ ಫಲಾನುಭವಿಗಳ ಹೆಸರು ಸಾಮ್ಯತೆ ಹೊಂದಿದ್ದಲ್ಲಿ Name Duplicate ಎಂದು ಹಾಗೂ ಒಂದೇ ಆಧಾರ್ ಸಂಖ್ಯೆಯನ್ನು ನಮೂದಿಸಿರುವ ಫಲಾನುಭವಿಗಳಿಗೆ UID duplicate ಎಂದು ತಾತ್ಕಲಿಕವಾಗಿ ಅನುದಾನವನ್ನು ತಡಹಿಡಿಯಲಾಗುತ್ತಿದೆ.<br>Name Duplicate ಹಾಗೂ UID duplicate ಆದ ಫಲಾನುಭವಿಗಳಿಗೆ ಹೋಲಿಕೆಯಿರುವ ಫಲಾನುಭವಿಗಳ ಆಧಾರ್ ಅನ್ನು ಪಡೆದು ಪರಿಶೀಲಿಸಿ ಆನ್‌ಲೈನ್‌ನಲ್ಲಿ ಅಳವಡಿಸಲು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಿದ್ದು, ಜಿಲ್ಲೆಗಳಿಂದ ಸಲ್ಲಿಸಲಾಗುವ ಪ್ರಕರಣಗಳಿಗೆ ನಿಗಮದ ಹಂತದಲ್ಲಿ ಪರಿಶೀಲಿಸಿ Name Duplicate ಹಾಗೂ UID duplicate ತೆರವುಗೊಳಿಸಿ ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ :ವಇ 376 ಹೆಚ್‌ಎಎಂ 2023

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

Annexure-1

LCQ-927

| Sl. No. | District | Completed |
|---|---|---|
| 1 | Bagalkot | 162854 |
| 2 | Ballari | 247443 |
| 3 | Belagavi | 462411 |
| 4 | Bengaluru Rural | 77212 |
| 5 | Bengaluru Urban | 82976 |
| 6 | Bidar | 164272 |
| 7 | Chamarajanagar | 113481 |
| 8 | Chikkaballapur | 115442 |
| 9 | Chikkamagaluru | 102000 |
| 10 | Chitradurga | 196469 |
| 11 | DakshinaKannada | 97997 |
| 12 | Davanagere | 203867 |
| 13 | Dharwad | 117950 |
| 14 | Gadag | 119995 |
| 15 | Hassan | 170456 |
| 16 | Haveri | 178856 |
| 17 | Kalaburagi | 218406 |
| 18 | Kodagu | 38127 |
| 19 | Kolar | 133863 |
| 20 | Koppal | 176586 |
| 21 | Mandya | 148665 |
| 22 | Mysuru | 223042 |
| 23 | Raichur | 265297 |
| 24 | Ramanagara | 121401 |
| 25 | Shivamogga | 148395 |
| 26 | Tumakuru | 293993 |
| 27 | Udupi | 67345 |
| 28 | UttaraKannada | 123780 |
| 29 | Vijayanagara | 6184 |
| 30 | Vijayapura | 229510 |
| 31 | Yadgiri | 135652 |
| Total | | **4943927** |